ಶ್ರೀ ಹೆಚ್. ಗಂಗಾಧರನ್.—ವರ್ಗಾವಣೆ ಬಗ್ಗೆ ಕಾನೂನು ಮಾಡಿದ್ದೀರಿ, ನಿಯಮ ಮಾಡಿದ್ದೀರಿ. ಆದರೆ ಈಗ ಏನಾಗಿದೆಯೆಂದರೆ ಸರ್ಕಾರಿ ಅಧಿಕಾರಿಗಳ ವರ್ಗಾವಣೆ ಸುಪೀರಿಯರ್ ಅಧಿಕಾರಿಗಳ whims & fancies ಮೇಲೆ ನಡೆಯುತ್ತಿದೆ. ಯಾರು ಬೇಕಾದವರಿರುತ್ತಾರೆ ಅವರಿಗೆ ಬೇಕಾದ ಸ್ಥಾನ ಸಿಗುತ್ತದೆ. ಇದು ಆಗಬಾರದು ಎಂಬ ದೃಷ್ಟಿಯಿಂದ ಇದಕ್ಕಾಗಿ ನಿರ್ದಿಷ್ಟವಾದ ಶಾಸನ ಇರಬೇಕೆಂದು ೧೯೭೮ನೇ ಇಸವಿಯಲ್ಲಿ ಸರ್ಕಾರೀ ನೌಕರರ ವರ್ಗಾವಣೆ ಬಗ್ಗೆ Government employees Transfers Protection Act ತರಬೇಕೆಂದು ಪ್ರೈವೇಟ್ ಮೆಂಬರ್ಸ್ ಬಿಲ್ ತಂದಿದ್ದೆ. ಒಬ್ಬ ಅಧಿಕಾರಿಯನ್ನು ಐದಾರು ವರ್ಷಗಳ ಕಾಲ ಆದನಂತರ ಒಂದು ಸ್ಥಾನದಲ್ಲಿ ಇಡಬಾರದು, ನಾಲ್ಕನೇ ದರ್ಜೆ ನೌಕರರಿಗಾದರೆ ಅವರು ೬ ತಿಂಗಳ ಮುಂಚೆ ಅವರ ಸ್ಥಳದ ೫೦ ಮೈಲಿ ಒಳಗಾಗಿ ಯಾವುದಾದರೂ ೫ ಸ್ಥಾನ ತೋರಿಸಿದರೆ ಅದರಲ್ಲಿ ಒಂದು ಸ್ಥಾನಕ್ಕೆ ಹಾಕುವಂತೆ ಕಾನೂನು ಮಾಡಬೇಕು ಎಂದು ಒಂದು ಬಿಲ್ ಇಂಟ್ರಡ್ಯೂಸ್ ಮಾಡಿದ್ದೆ. ಆಗ ಸರ್ಕಾರ ಅದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. Whims and fancies of the superior Officers ವರ್ಗಾವಣೆ ಆಗುವುದನ್ನು ತಪ್ಪಿಸಲು ನಾನು ಮಂಡಿಸಿದ್ದ ಬಿಲ್ಲಿನ ಆಧಾರದ ಮೇಲೆ ಒಂದು ಹೊಸ ಮಸೂದೆಯನ್ನು ಸಭೆಯ ಮುಂದೆ ತರುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಆರ್. ಗುಂಡೂರಾವ್.—Whims and fancies of the Officers ಪ್ರಕಾರ ವರ್ಗಾವಣೆಗಳು ನಡೆಯುವುದಿಲ್ಲ. ಆದರಲ್ಲೂ ೧೫ ತಿಂಗಳಿಂದ ಆ ರೀತಿ ನಡೆದಿಲ್ಲ ಎಂದು ಹೇಳಬಲ್ಲೆ. ಇದಕ್ಕಾಗಿಯೇ ಒಂದು ಸಮಿತಿ ಇದೆ. ಆ ಸಮಿತಿಯಲ್ಲಿ ಮೂರು ಜನ ಕಾರ್ಯದರ್ಶಿಗಳು, ಮುಖ್ಯ ಕಾರ್ಯದರ್ಶಿಯವರು ಇದ್ದು ಅವರು ಕುಳಿತುಕೊಂಡು ಯಾರು ಯಾವ ಯಾವ ಕೆಲಸ ಮಾಡುತ್ತಾರೆ ಎಂಬುದನ್ನು ನೋಡಿ, ಸೀನಿಯಾರಿಟಿ ನೋಡಿ ಎಲ್ಲವನ್ನೂ ಅವರ ಮಟ್ಟದಲ್ಲಿ ಪರಿಶೀಲನೆ ಮಾಡಿ ಅವರು ತೀರ್ಮಾನ ಮಾಡಿದ ಮೇಲೆ ಇಂಥಿಂಥವರನ್ನು ಇಂಥಿಂಥ ಹುದ್ದೆಗೆ ನೇಮಕ ಮಾಡಬಹುದು ಎಂಬ ಸೂಚನೆ ಕಳುಹಿಸುತ್ತಾರೆ. ಆದರೆ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ಟ್ರಾನ್ಸ್‌ಫರ್‌ನ್ನು ಮುಖ್ಯಮಂತ್ರಿಗಳು ಮಾಡುತ್ತಾರೆ. ಆದರೆ ಬೇರೆ ಎಲ್ಲಾ ಆದಕ್ಕೆ ಸಂಬಂಧಪಟ್ಟ ಸಮಿತಿ ಶಿಫಾರಸು ಮಾಡಿದ ಮೇಲೆ ಅದನ್ನು ಪರಿಶೀಲನೆ ಮಾಡಿ ಮುಖ್ಯಮಂತ್ರಿಗಳು ತೀರ್ಮಾನ ತೆಗೆದುಕೊಳ್ಳುತ್ತಾರೆ. ಕೆಲವು ಅನ್ಯಾಯಗಳು ಎಲ್ಲೋ ಒಂದೊಂದು ಆಗಬಹುದು. ಆದನ್ನು ಏನೂ ಮಾಡುವುದಕ್ಕಾಗುವುದಿಲ್ಲ.

Scarcity of Drinking water in Athani Taluk

488 SRI BAVURAO DESHPANDE (Dharwar).—Will the Minister for Housing and Urban Development be pleased to state.—

(a) whether it has come to the notice of Government that the water supply scheme for Athani town was prepared when the population was only 18,000 but the Government is unable to provide sufficient quantity of drinking water to the citizens since the present population of the town is more than 30,000;

(b) whether the Government, is contemplating to formulate a new water supply scheme to Athani town considering the present and future increase in the population ?

SRI DHARAM SINGH NARAYAN SINGH (Minister for Housing and Urban Development)

(a) Yes.

(b) Yes.

ಶ್ರೀ ಬಾಪೂರಾವ್ ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಈ ಅಥಣಿ ಪಟ್ಟಣಕ್ಕೆ ಹೊಸ ನೀರು ಸರಬರಾಜು ಯೋಜನೆ ಮಾಡುವ ಯೋಚನೆ ಇದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಈಗಾಗಲೇ ಯೋಜನೆ ಮಾಡಿದ್ದೀರಾ ಅಥವಾ ಮುಂದೆ ಮಾಡುತ್ತೀರಾ ಹೇಗೆ ?

† ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಥಣಿ ಪಟ್ಟಣಕ್ಕೆ ಒಂದು ನೀರು ಸರಬರಾಜು ಯೋಜನೆ ಇದೆ. ೧೯೫೯ರಲ್ಲಿ ಅದು ಪ್ರಾರಂಭವಾಗಿ ಈಗಾಗಲೇ ಮುಗಿದಿದೆ. ಆಗ ಜನಸಂಖ್ಯೆ ೧೮ ಸಾವಿರ ಇದ್ದು ಈಗ ೩೨ ಸಾವಿರ ಜನಸಂಖ್ಯೆಯಾಗಿದೆ. ಮತ್ತು ಮುಂದೆ ೨೦ ವರ್ಷ ಗಳಲ್ಲಿ ಆಗಬಹುದಾದ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ೪೦ ಸಾವಿರ ಜನಸಂಖ್ಯೆಗೆ ಆಗುವಂಥ ಮತ್ತೊಂದು ಯೋಜನೆಯನ್ನು ಮಾಡಲಾಗಿದೆ. ಅದು ಈಗಾಗಲೇ ಸರ್ಕಾರದ ಪರಿಶೀಲನೆಯಲ್ಲಿದೆ. ಅಲ್ಲಿನ ಜನಸಂಖ್ಯೆ ೨೦ ಸಾವಿರಕ್ಕಿಂತಲೂ ಹೆಚ್ಚಾಗಿರುವ ಕಾರಣ ಈ ಯೋಜನೆಗೆ ಮುನಿಸಿಪಾಲಿಟಿಯವರು ೧೦ ಲಕ್ಷ ರೂಪಾಯಿ ಕೊಡಬೇಕಾಗುತ್ತದೆ. ೨೩ ಲಕ್ಷ ರೂಪಾಯಿಗಳನ್ನು ಎಲ್.ಐ.ಸಿ.ಯವರು ಕೊಡ ಬೇಕಾಗಿದೆ; ಹೀಗೆ ಎಲ್ಲ ಹಣ ಪಡೆದು ಯೋಜನೆಯನ್ನು ಮಾಡುತ್ತಿದ್ದೇವೆ.

ಶ್ರೀ ಬಾಪೂರಾವ್ ದೇಶಪಾಂಡೆ.—ನನ್ನ ಮಾಹಿತಿ ಪ್ರಕಾರ ೩೦ ಲಕ್ಷ ರೂಪಾಯಿಗಳನ್ನು ಅಲ್ಲಿನ ನಗರಸಭೆಯವರಿಂದ ಕೇಳಿದ್ದಾರೆ. ಅಲ್ಲಿನ ನಗರಸಭೆ ಈಗ ಆಡಳಿತಾಧಿಕಾರಿಗಳ ಕೈಯಲ್ಲಿದೆ. ನಗರಸಭೆ ೩೦ ಲಕ್ಷ ರೂಪಾಯಿಗಳನ್ನು ಈಗ ಕೊಡುವ ಪರಿಸ್ಥಿತಿಯಲ್ಲಿಲ್ಲ. ಯೋಜನೆ ಮಾಡಿದ್ದರೂ ಸಹ ನಗರಸಭೆ ಯಿಂದ ಹಣ ಕೊಡದೇ ಇರುವುದರಿಂದ ಅದು ಹಾಗೆಯೇ ಬಿದ್ದಿದೆಯೆಂದು ಕೇಳಿದ್ದೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತೀರಿ ?

ಶ್ರೀ ಧರ್ಮಸಿಂಗ್.—ಈ ಯೋಜನೆಗಾಗಿ ೩೦ ಲಕ್ಷ ರೂಪಾಯಿಗಳನ್ನು ಕೇಳಿಲ್ಲ. ಅದು ತಪ್ಪು ಮಾಹಿತಿ. ನಾವು ಕೇಳಿರುವುದು ೧೦ ಲಕ್ಷ ರೂಪಾಯಿ. ಅದನ್ನು ಅವರು ಕೊಡುವ ಪರಿಸ್ಥಿತಿಯಲ್ಲಿಲ್ಲ ಆದರೂ ಹೇಗಾದರೂ ಅಡ್ಜಸ್ಟ್ ಮಾಡಿ ಈ ಯೋಜನೆಯನ್ನು ಮಾಡಬೇಕೆಂದಿದೇವೆ. ಅದೇ ರೀತಿ ಅದನ್ನು ಮಾಡುತ್ತಿದ್ದೇವೆ. ಜೊತೆಗೆ ಓವರ್‌ಹೆಡ್ ಟ್ಯಾಂಕ್ ಮಾಡಿ ಪಂಪಿಂಗ್ ಕೆಪಾಸಿಟಿ ಒದಗಿಸಿ ದ್ದೇವೆ. ಬಾವಿಗಳನ್ನು ಕೂಡ ಮಾಡಿದ್ದೇವೆ.

ಶ್ರೀ ಬಾಪೂರಾವ್ ದೇಶಪಾಂಡೆ.—ಅಲ್ಲಿ ನೀರಿಗೆ ತುಂಬಾ ತೊಂದರೆಯಾಗಿರುವುದರಿಂದ ಮುನಿಸಿ ಪಾಲಿಟಿಯವರು ಸ್ಕೇರ್‌ಸಿಟಿ ವರ್ಕ್ಸ್‌ನಲ್ಲಿ ಬೋರ್‌ವೆಲ್ಸ್ ತೆಗೆಯುವಂತೆ ಸೂಚನೆ ಕೊಡುತ್ತೀರಾ ?

ಶ್ರೀ ಧರ್ಮಸಿಂಗ್.—ಈಗಾಗಲೇ ಮಾಡಿದ್ದೇವೆ.

Opening of a Primary School at Chickmagalur District

553 SMT. MOTAMMA (Mudigere).—Will the Minister of State for Primary and Secondary Education be pleased to state.—

(a) whether the Government is contemplating to open one primary school at Chickmagalur town which is the head-quarters of Chickmagalur district and a malnad area;

(b) if not, the action taken by the Government for opening a school ?

SMT. NAGAMMA C. KESHAVAMURTHY (Minister of State for Primary and Secondary Education).—

(a) No.

(b) If necessary, a primary school will be opened under compulsory primary education scheme.